ಅರ್ಥ ಮಾಡಿಸುವುದು ಅವಳ ಜವಾಬ್ದಾರಿಯಾಗಿರುತ್ತದೆ. ಅಥವಾ ಅವನಿಗೆ ಹಾಗೆ ಅನಿಸಿದರೆ, ಅದನ್ನು ಅವಳಿಗೆ ಅರ್ಥ ಮಾಡಿಸುವುದೂ ಅವನ ಜವಾಬ್ದಾರಿ ಆಗಿರುತ್ತದೆ. ಈ ಅರ್ಥೈಸುವಿಕೆಯ ಪ್ರಕ್ರಿಯೆ ಸಂಕೀರ್ಣವಾದುದು ಎಂದು ಒಪ್ಪಿಕೊಳ್ಳೋಣ. ಕನಿಷ್ಠ ಪಕ್ಷ, ಅವಳಿಗೆ ತೊಂದರೆಯಾಗುತ್ತಿದೆ ಎಂಬಷ್ಟನ್ನಾದರೂ ಅರಿತುಕೊಳ್ಳುವುದು ವ್ಯಕ್ತಿಗಳಿಗೆ ಕಷ್ಟವಾಗಲಿಕ್ಕಿಲ್ಲ. ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿ ಈ ಸ್ಪೇಸ್ ಇದ್ದಾಗ ಅದು ಸುಂದರವಾಗಿಡ ಉಳಿಯುತ್ತದೆ' ಎಂದು ವಿವರಿಸುತ್ತಾರೆ.

ಮದುವೆಯಲ್ಲಿ ಎಲ್ಲವೂ ಸುರಕ್ಷಿತವಾಗಿರುತ್ತದೆ. ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿ ಅಸುರಕ್ಷಿತವಾದ ಸಂಬಂಧವಿರುತ್ತದೆ ಎಂದು ಸಾರಾಸಗಟಾಗಿ ತಳ್ಳಿಹಾಕುವಂತಿಲ್ಲ. ಸಮಸ್ಯೆಗಳು ಅಲ್ಲಿಯೂ ಸೃಷ್ಟಿಯಾಗುತ್ತವೆ. ಲಿವ್ ಇನ್ ಸಂಬಂಧದಲ್ಲಿ ದೌರ್ಜನ್ಯಗಳು ನಡೆದರೆ, 'ಕೌಟುಂಬಿಕ ಹಿಂಸೆ ನಿಯಂತ್ರಣ ಕಾಯ್ದೆ' ಅನ್ವಯವಾಗುತ್ತದೆ. ಆದರೆ ಆಸ್ತಿ ಹಕ್ಕು, ಗಂಡನ ಮನೆಯಲ್ಲಿ ವಾಸಿಸುವ ಹಕ್ಕುಗಳು ಆಕೆಗೆ ಇರುವುದಿಲ್ಲ. ಒಟ್ಟಾರೆಯಾಗಿ ಈ ಸಂಬಂಧದಲ್ಲಿ ಸಮಸ್ಯೆಗಳುಂಟಾದಾಗ ವ್ಯಕ್ತಿಗೆ ಅನ್ವಯವಾಗುವ ವೈಯಕ್ತಿಕ ಹಕ್ಕುಗಳು, ಅಭಿವ್ಯಕ್ತಿ ಸ್ವಾತಂತ್ರ್ಯ, ಮೂಲಭೂತ ಹಕ್ಕುಗಳನ್ನು ಸಂರಕ್ಷಿಸುವ ಆಯಾಮಗಳನ್ನಿಟ್ಟುಕೊಂಡು ಈ ಸಂಬಂಧದೊಳಗೆ ಎದುರಾಗುವ ಬಿಕ್ಕಟ್ಟುಗಳನ್ನು ಕೋರ್ಟ್ ಬಗೆಹರಿಸುತ್ತದೆ. ಪ್ರೌಢ ವ್ಯಕ್ತಿಗಳಿಬ್ಬರು ಈ ಎಲ್ಲ ಸಾಧ್ಯತೆಗಳನ್ನು ಗಮನಿಸಿಕೊಂಡೇ ಸಂಬಂಧವನ್ನು ಒಪ್ಪಿಕೊಳ್ಳಬೇಕೇ ಹೊರತು ಭಾವನೆಗಳ ಮಹಾಪೂರದಲ್ಲಿ ಕೊಚ್ಚಿಹೋಗುವುದು ಸರಿಯಲ್ಲ ಎನ್ನುವುದು ಮರ್ಲಿನ್ ಮಾರ್ಟಿಸ್ ಅವರ ಅಭಿಪ್ರಾಯ.

ಲಿವ್ ಇನ್ ರಿಲೇಷನ್‌ಶಿಪ್ ಎಂಬ ಹೊಸ ರೀತಿಯ ಸಂಬಂಧವು ಭಾರತೀಯ ಸಮಾಜದಲ್ಲಿ ಇತ್ತೀಚೆಗಷ್ಟೇ ಹೆಚ್ಚು ಚರ್ಚೆಗೆ ಒಳಗಾಗುತ್ತಿದೆ. ಹಿಂದೆಲ್ಲ ಇಂತಹ ಒಂದು ಸಂಬಂಧದ ಕುರಿತು ಸಾರ್ವಜನಿಕವಾಗಿ ಮುಕ್ತವಾಗಿ ಮಾತನಾಡುವುದೇ ಅಪಚಾರ ಎಂಬ ಭಾವನೆಯಿತ್ತು. ಸಭೆ ಸಮಾರಂಭಗಳಲ್ಲಿ ಈ ವಿಷಯವಾಗಿ ಮಾತನಾಡುವಾಗ ಧ್ವನಿಯನ್ನು ತಗ್ಗಿಸಿ ಮಾತನಾಡುವುದೋ ಅಥವಾ ಅಪಹಾಸ್ಯದ ಧೋರಣೆಯೊಂದಿಗೆ ಮಾತನಾಡುವುದೋ ಮಾಮೂಲಿಯಾಗಿತ್ತು. ಆದರೆ ಈಗ ಈ ಸಂಬಂಧದ ಕುರಿತು ಹೆಚ್ಚು ಸ್ಪಷ್ಟತೆ ಇಲ್ಲದೇ ಇದ್ದರೂ, ಮುಕ್ತವಾಗಿ ಮಾತನಾಡುವುದೇ ಅಪರಾಧ ಎಂಬ ಭಾವನೆ ದೂರವಾಗಿದೆ. ಕೌಟುಂಬಿಕ ವ್ಯವಸ್ಥೆಯನ್ನು ಹೆಚ್ಚು ನಂಬಿಕೊಂಡಿರುವ ಭಾರತೀಯ ಸಮಾಜದಲ್ಲಿ ಕುಟುಂಬದ ಹೊರತಾದ ಇಂತಹ ಒಂದು ವ್ಯವಸ್ಥೆಯ ಬಗ್ಗೆ ಕುತೂಹಲವಿನ್ನೂ ಅಳಿದಿಲ್ಲ. ನಗರಗಳಲ್ಲಿ ಇಂತಹ ಸಂಬಂಧಗಳು ಚಾಲ್ತಿಯಲ್ಲಿವೆ ಎಂಬ ಮಾತುಗಳು ಗ್ರಾಮೀಣ ಪ್ರದೇಶದ ಮನೆಗಳಲ್ಲಿ ಕೇಳಿ ಬರುತ್ತದೆಯಷ್ಟೇ. ತಮ್ಮದೇ ಮಕ್ಕಳು ನಗರದಲ್ಲಿ ಹೀಗೆ ಬದುಕುತ್ತಿದ್ದಾರೆ ಎಂಬ ವಿಚಾರವನ್ನು ಅಪ್ಪ ಅಮ್ಮಂದಿರು ಮುಕ್ತ ಮನಸ್ಸಿನಿಂದ ಸ್ವೀಕರಿಸುವುದು ಸಾಧ್ಯವಾಗಿಲ್ಲ. ಅನಿವಾರ್ಯತೆಯನ್ನು ಒಪ್ಪಿಕೊಳ್ಳದೇ ವಿಧಿಯಿಲ್ಲ ಎಂಬ ಸ್ಥಿತಿಯಷ್ಟೇ ಇದೆ.

## ಕಾನೂನುಗಳ ಅರಿವಿನ ಕೊರತೆ

ಭಾರತೀಯ ಸಮಾಜದಲ್ಲಿ ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿ ಅಥವಾ ಇಬ್ಬರು ವ್ಯಕ್ತಿಗಳು 'ಸಮ್ಮತಿಯ ಸಹಬಾಳ್ವೆ' ನಡೆಸುವುದು ಅಪರಾಧವೇನೂ ಅಲ್ಲ. ಆದರೆ ಅಂತಹ ಸಂಬಂಧಗಳಲ್ಲಿ ಏರುಪೇರುಗಳಾದಾಗ ಅವರಿಗೆ ದೊರೆಯುವ ಕಾನೂನು ರಕ್ಷಣೆಗಳು ಏನೇನು ಎಂಬ ಬಗ್ಗೆ ಸಾರ್ವಜನಿಕರಲ್ಲಿ ಅರಿವಿನ ಕೊರತೆಯಿದೆ. ಲಿವ್ ಇನ್ ರಿಲೇಷನ್‌ಶಿಪ್‌ಗೇ ಅನ್ವಯಿಸುವಂತೆ ಸ್ಪಷ್ಟವಾದ ಕಾನೂನು ರಚನೆ ಆಗದೇ ಇರುವ ಸಂದರ್ಭದಲ್ಲಿ ನ್ಯಾಯಾಲಯಗಳು ಪ್ರಸ್ತುತ ಇರುವ ಕಾನೂನುಗಳನ್ನೇ ಅನ್ವಯಿಸಿ ತಮ್ಮ ಮುಂದಿರುವ ಪ್ರಕರಣಗಳನ್ನು ಬಗೆಹರಿಸಲು ಪ್ರಯತ್ನಿಸುತ್ತಿವೆ. ಭಾರತೀಯ ನ್ಯಾಯಾಂಗ ವ್ಯವಸ್ಥೆಯಲ್ಲಿ ಈ ರೀತಿಯ ಸಂಬಂಧಕ್ಕೆ ಸಂಬಂಧಿಸಿ ಸ್ಪಷ್ಟವಾದ ಕಾನೂನು ಇಲ್ಲದೇ ಇದ್ದರೂ, ಕಳೆದ ಹಲವು ವರ್ಷಗಳ ನ್ಯಾಯಾಲಯಗಳು ನೀಡಿದ ತೀರ್ಪುಗಳ ಆಧಾರದಲ್ಲಿಯೇ ನ್ಯಾಯಾಂಗ ವ್ಯವಸ್ಥೆಯು ಒಂದು ರೀತಿಯ ಕಾನೂನು ಕೌಶಲವನ್ನು ಅಭಿವೃದ್ಧಿಪಡಿಸಿಕೊಂಡಿವೆ ಎನ್ನಬಹುದು.

ಲಿವ್ ಇನ್ ರಿಲೇಷನ್‌ಶಿಪ್ ಅಪರಾಧವೇನೂ ಅಲ್ಲ ಎಂದು ನ್ಯಾಯಾಂಗ ಹೇಳುತ್ತದೆ. 1978ರಲ್ಲಿ ಬದ್ರಿಪ್ರಸಾದ್ ವರ್ಸಸ್ ಬೋರ್ಡ್ ಆಫ್ ಕನ್ಸಾಲಿಡೇಟರ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಗಮನಿಸಬಹುದು. ದೀರ್ಘ ಕಾಲದವರೆಗೆ ಗಂಡು–ಹೆಣ್ಣು ದಂಪತಿಗಳಂತೆ ಜೀವನ ಮಾಡಿದ್ದಲ್ಲಿ ಈ ಸಂಬಂಧವನ್ನು ಮದುವೆಯ ಪರಿಧಿಗೇ ತರಬಹುದು ಎಂದು ಈ ತೀರ್ಪು ಹೇಳುತ್ತದೆ. 2001ರಲ್ಲಿ ಅಲಹಾಬಾದ್ ಹೈಕೋರ್ಟ್ ಗಂಡು–ಹೆಣ್ಣು ಮದುವೆಯಿಲ್ಲದೆ ಒಟ್ಟಾಗಿ ಬಾಳುವುದು ತಪ್ಪಲ್ಲ ಎಂಬರ್ಥದ ತೀರ್ಪನ್ನು ಕೊಟ್ಟಿದೆ. ಇಲ್ಲಿ ಕಾನೂನು ಮತ್ತು ನೈತಿಕತೆಯ ನಡುವಿನ ವ್ಯತ್ಯಾಸವನ್ನು ನ್ಯಾಯಾಲಯ ಹೇಳಿದ್ದು ಕಾನೂನು ಪ್ರಕಾರ ತಪ್ಪಲ್ಲ. ಆದರೆ ಅದು ಸಾಮಾಜಿಕವಾಗಿ ಅನೈತಿಕ ಎಂದು ಅನಿಸಬಹುದು ಎಂದು ಹೇಳಿದೆ.

ನೈತಿಕತೆ ಎಂಬುದು ಸಾಪೇಕ್ಷ ಪದವಾಗಿರುವುದರಿಂದ ಈ ಸಂಬಂಧವನ್ನು ಕುರಿತು ಏಕಪ್ರಕಾರವಾದ ಗ್ರಹಿಕೆ ಎಲ್ಲ ಕಡೆಯೂ ಇರುವುದು ಸಾಧ್ಯವಿಲ್ಲ. ಪಾಶ್ಚಾತ್ಯ ಸಮಾಜದಲ್ಲಿ ನೈತಿಕತೆಯ ವ್ಯಾಖ್ಯೆ ಮತ್ತು ಭಾರತೀಯ ಸಮಾಜದಲ್ಲಿ ನೈತಿಕತೆಯ ವ್ಯಾಖ್ಯೆ ಬೇರೆ ಬೇರೆ ತೆರನಾಗಿರುತ್ತದೆ. ಭಾರತೀಯ ಸಮಾಜದಲ್ಲಿ ನೈತಿಕತೆಯ ನಿಯಮಗಳು ಹೆಣ್ಣಿಗೆ ಹೆಚ್ಚು ಅನ್ವಯವಾಗುವುದರಿಂದ, ಲಿವ್ ಇನ್ ರಿಲೇಷನ್‌ಶಿಪ್ ಎಂಬ ಹೊಸ ಮಾದರಿಯ ಸಹಬಾಳ್ವೆಯಿಂದ ಅಂತಿಮವಾಗಿ ಹೆಣ್ಣಿಗೆ ತೊಂದರೆಯಾಗಬಹುದು ಎಂಬ ಆತಂಕ



### ಹೊಂದಾಣಿಕೆಯಲ್ಲೇ ಎಲ್ಲವೂ ಇದೆ...

ಭಾರತದಲ್ಲಿ ಮದುವೆಯನ್ನು ಪುರುಷ ಮತ್ತು ಮಹಿಳೆ ನಡುವಿನ ಒಂದು 'ಪವಿತ್ರ ಬಂಧನ' ಎಂದು ಪರಿಗಣಿಸಲಾಗುತ್ತದೆ. ಆದ್ದರಿಂದ, ಪುರುಷ ಮತ್ತು ಮಹಿಳೆ ಒಟ್ಟಿಗೆ ವಾಸಿಸಲು ಬಯಸಿದರೆ, 'ಮದುವೆ' ಎಂಬ ಸಂಪ್ರದಾಯದಲ್ಲಿ ತಮ್ಮನ್ನು ತಾವು ಬಂಧಿಸಿಕೊಳ್ಳಬೇಕು. ಇದೀಗ 21ನೇ ಶತಮಾನದಲ್ಲಿ 'ಲಿವ್ ಇನ್ ರಿಲೇಷನ್‌ಶಿಪ್' ಎಂದು ಕರೆಯಲಾಗುವ ಪರಿಕಲ್ಪನೆಯ ಕುರಿತು ಚರ್ಚೆಯಾಗುತ್ತಿದೆ. ಪುರುಷ ಮತ್ತು ಮಹಿಳೆ ಮದುವೆಯಾಗದೆ ಒಟ್ಟಿಗೆ ವಾಸಿಸುವ ಪರಿಕಲ್ಪನೆಯನ್ನು ಈಗಲೂ ಸಮಾಜ ನೈತಿಕ ಎಂದು ಪರಿಗಣಿಸುವುದರ ಬಗ್ಗೆ ಗೊಂದಲಗಳು ಇದ್ದೇಇವೆ. ಆದರೆ, ಸುಪ್ರೀಂ ಕೋರ್ಟ್ ಹಾಗೂ ವಿವಿಧ ನ್ಯಾಯಾಲಯಗಳ ತೀರ್ಪುಗಳು ಲಿವ್ ಇನ್ ರಿಲೇಷನ್‌ಶಿಪ್ ಪರಿಕಲ್ಪನೆಯನ್ನು ಕಾನೂನು ಪುಸ್ತಕಗಳಿಗೆ ಮನ್ನಣೆ ನೀಡುತ್ತಾ ಎತ್ತಿಹಿಡಿದಿವೆ ಮತ್ತು ಅದನ್ನು ಕಾನೂನುಬದ್ಧಗೊಳಿಸಿವೆ.

ಜೊತೆಯಾಗಿ ಬದುಕು ಸಾಗಿಸಿ, ನಂತರ ಸಂಬಂಧವನ್ನು ಯಾವುದೋ ಕಾರಣಕ್ಕೆ ಮುಂದುವರಿಸಲು ಅಥವಾ ಕಾನೂನುಬದ್ಧವಾಗಿ ಮದುವೆಯಾಗಲು ವಿಫಲವಾದಾಗ, ಅಂತಹ ಮಹಿಳೆಗೆ ಕಾನೂನು ಬಲವು ಸಿಗದೆ ಬದುಕನ್ನು ನಿಭಾಯಿಸುವ ಹೆಚ್ಚುವರಿ ಹೊಣೆ ಹೊರಬೇಕಾಗುತ್ತದೆ ಎನ್ನುವುದಂತೂ ಸತ್ಯ. ಹೊಂದಾಣಿಕೆಯ ಕೊರತೆಯಿಂದ ಮದುವೆ ಹೇಗೆ ಮುರಿದುಬೀಳುತ್ತದೋ, ಲಿವ್ ಇನ್ ರಿಲೇಷನ್‌ಶಿಪ್ ಕೂಡ ಅಂತಹುದೇ ಸವಾಲುಗಳನ್ನು ಎದುರಿಸುತ್ತದೆ. ಅಂತಿಮವಾಗಿ ಇದು ಕೂಡ ಶಾಶ್ವತವಲ್ಲ ಎನ್ನುವ ಅರಿವು ಇಬ್ಬರಿಗೂ ಇರಬೇಕು ಮತ್ತು ಮುಂದಿನ ಬದುಕನ್ನು ಎದುರಿಸಲು ಸನ್ನದ್ಧರಾಗಿರಬೇಕು.

**–ನಿಕೇಶ್ ಶೆಟ್ಟಿ**
ವಕೀಲರು, ಮಂಗಳೂರು